# ವಿಕ್ಟೋರಿಯಾ.

1239
A-1239
ಕನ್ನಡ ಸಾಹಿತ್ಯ ಪರಿಷತ್ತು
ಸಂಸ್ಕೃತಿ ಭಂಡಾರ
ಬೆಂಗಳೂರು-೧೮.

...ಕ್ಸರ್ಟೆ ಬ್ರಾಂಚು ಪ್ರೆಸ್.
ಬೆಂಗಳೂರು ಸಿಟಿ
...915.

...ಭಂಡಾರ
ಪರಿಷತ್ತು
Digitized by ROJA MUTHIAH RESEARCH LIBRARY

1239
A-1239
ಧ.125
Presented to the Kanada Academy
Bangalore

ವಿಕ್ಟೋರಿಯಾ.

ಕರ್ಣಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
277
ಕ್ರಮ ಸಂಖ್ಯೆ 1239 ವರ್ಗ ಸಂಖ್ಯೆ ಧ.125
ತಾರೀಖು..........................
ಬೆಲೆ..........................

Digitized by ROJA MUTHIAH RESEARCH LIBRARY

A-1239.

V, 56ಜ VIC N

**1915 Publications.**

—o—

ಗ್ಲಾಡ್‌ಸ್ಟನ್‌ರವರ ಮಹಿಮೆ.

'ನನ್ನ ಆಚಾರ್ಯ'

(ಸ್ವಾಮಿ ವಿವೇಕಾನಂದರವರ ಉಪನ್ಯಾಸ.)

'ಜನರಲ್ಲಿ ಕಾರ್ಯನಿರ್ವಾಹಕ ಶಕ್ತಿಯನ್ನು ಹೆಚ್ಚಿಸುವುದು ಹೇಗೆ' ಎಂಬ ಉಪನ್ಯಾಸ.

ಭಾರತ ಕಥಾಸಾರ ಸಂಗ್ರಹ.

ಕಲಿಯುಗ (ಒಂದು ಹೊಸಕಥೆ).

ವಿಕ್ಟೋರಿಯಾ.

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ, ಬೆಂಗಳೂರು-೧೮.

Digitized by ROJA MUTHIAH RESEARCH LIBRARY



ವಿಕ್ಟೋರಿಯಾ ಚಕ್ರವರ್ತಿನಿಯವರು.

# ವಿಕ್ಟೋರಿಯಾ.

ಶ್ರೀರಾಮ.

Digitized by ROJA MUTHIAH RESEARCH LIBRARY

# ಉಪೋದ್ಘಾತ

ಮಹನೀಯರ ಸಚ್ಚರಿತ್ರೆಗಳನ್ನು ಓದುವುದರಿಂದ ವಿಶೇಷ ಪ್ರಯೋಜನವುಂಟು. ಈ ಉದ್ದೇಶದಿಂದ, ವಿಕ್ಟೋರಿಯಾ ಚಕ್ರವರ್ತಿನಿಯವರ ಗುಣವಿಶೇಷವನ್ನು ಸಂಗ್ರಹಿಸಿ ನಮ್ಮ ದೇಶದ ಬಾಲಕ, ಬಾಲಕಿಯರ ಉಪಯೋಗಕ್ಕಾಗಿ, ಈ ಸಣ್ಣ ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಿಸಿರುತ್ತೇನೆ.

ಬೆಂಗಳೂರು
12-12-1915.

ಶ್ರೀರಾಮ

# ವಿಕ್ಟೋರಿಯಾ.

ಬ್ರಿಟಿಷು ಚಕ್ರಾಧಿಪತ್ಯಕ್ಕೆ 1830ರಲ್ಲಿ ನಾಲ್ಕನೇ ವಿಲಿಯಂ ರಾಜನಾಗಿದ್ದನು. ಇವನಿಗೆ ಪುತ್ರರು ಯಾರೂ ಇರಲಿಲ್ಲ. ಇದ್ದ ಪುತ್ರಿಯರೀರ್ವರೂ ಚಿಕ್ಕ ವಯಸ್ಸಿನಲ್ಲೇ ಸ್ವರ್ಗಸ್ಥರಾದರು. ಮುಂದೆ ರಾಜ್ಯಕ್ಕೆ ಇವನ ತಮ್ಮ "ಕೆಂಟಿನಡ್ಯೂಕ್" ಹಕ್ಕುದಾರನಾದನು.

ಕೆಂಟಿನಡ್ಯೂಕ್ 1818ರಲ್ಲಿ, ಬೆಲ್ಜಿಯಂ ಛೊರೆ ಲಿಯೋಪಾಲ್ಡನ ತಂಗಿ, ವಿಕ್ಟೋರಿಯಾ ಮೇರಿಯನ್ನು ವಿವಾಹಮಾಡಿಕೊಂಡನು. 1819ನೇ ಮೇ 24ನೇ ದಿನ ಈ ದಂಪತಿಗಳಿಗೆ ಅಲೆಕ್ಸಾಂಡ್ರಿನಾ ವಿಕ್ಟೋರಿಯಾ ಎಂಬ ಕನ್ಯಾರತ್ನವು ಜನನವಾಯಿತು. "ಡ್ಯೂಕ್"ನ ಸಂತೋಷವನ್ನು ವರ್ಣಿಸಲಾರೆವು. ದೈವಭಕ್ತಿಯುಳ್ಳ "ಡ್ಯೂಕ್" ತನ್ನ ಪುತ್ರಿಗೆ ದೇವರು ಪರಮಾನುಗ್ರಹದಿಂದ ಸುಖಸಂತೋಷಗಳನ್ನು ದಯಪಾಲಿಸಲೆಂದು ಪ್ರಾರ್ಥಿಸಿದನು.

1820ರಲ್ಲಿ ಎಂದರೆ, ವಿಕ್ಟೋರಿಯಾ ಕುಮಾರಿಗೆ ಒಂದು ವರುಷ ತುಂಬುವುದರೊಳಗೆ, ತಂದೆಯು ದೈವಾಧೀನನಾದನು. ತಾಯಿಯು ಅಗಾಧ ದುಃಖಕ್ಕೊಳಗಾದರೂ, ಪುತ್ರಿಯ ಲಾಲನೆ ಪಾಲನೆಗಳಲ್ಲಿಯೇ ಪೂರ್ಣ ಗಮನವನ್ನಿಟ್ಟು, ಅದೊಂದೇ ಕಾರ್ಯ

Digitized by ROJA MUTHIAH RESEARCH LIBRARY

ದಲ್ಲಿ ನಿರತಳಾದಳು. ಈಕೆಯಷ್ಟು ಪವಿತ್ರವಾದ ಪ್ರೀತಿಯೂ,
ಬಾಲಶಿಕ್ಷಣೆಯಲ್ಲಿ ಶ್ರದ್ಧೆಯೂ, ಉಳ್ಳವರು ಅತಿ ವಿರಳರು.
ಕೈಗೊಂಡ ಪ್ರತಿ ಕೆಲಸವನ್ನೂ ಶ್ರದ್ಧೆಯಿಂದ, ತಪ್ಪಿಲ್ಲದಂತೆ,
ತೃಪ್ತಿಕರವಾಗಿ ಮಾಡುವ ಒಳ್ಳೆಯ ಪದ್ಧತಿಯನ್ನು ತಾಯಿ
ಬಾಲ್ಯದಿಂದಲೂ, ಪುತ್ರಿಯಲ್ಲಿ ಅಭಿವೃದ್ಧಿಪಡಿಸಿದಳು. ಇದರ
ಜತೆಗೆ, ಅಟ್ಟಹಾಸವಿಲ್ಲದೆ ಜೀವಿಸುವುದನ್ನೂ, ಒಂದು ನಿಯಮ
ವನ್ನು ಅನುಸರಿಸಿ ದಿನದ ಕೆಲಸಗಳನ್ನು ಕ್ರಮದಿಂದ ಮಾಡುವು
ದನ್ನೂ, ರಾಜಪುತ್ರಿಗೆ ಬಾಲ್ಯದಿಂದಲೂ ಅಭ್ಯಾಸ ಮಾಡಿಸಿದಳು.
'ವಿಕ್ಟೋರಿಯಾ' ಬಾಲ್ಯದಿಂದಲೂ ಅನೃತವನ್ನು ಅಡಿಯೇ
ಅರಿಯಳು. ಆಗಾಗ ಪ್ರಕಾಶವಾಗುತ್ತಿದ್ದ ಸ್ವಲ್ಪ ಹಟಕ್ಕೆ
ರಾಜಪುತ್ರಿಯ ಉತ್ಸಾಹ, ಶ್ರದ್ಧೆ, ಮನೋದಾರ್ಢ್ಯವೇ ಕಾರಣ
ಗಳಿರಬಹುದು. ರಾಜಪುತ್ರಿಗೆ ಬೊಂಬೆಗಳಲ್ಲಿ ವಿಶೇಷ ಪ್ರೀತಿ
ಯಿದ್ದಿತು. ಚರಿತ್ರೆಯಲ್ಲಿ ವರ್ಣಿತರಾಗಿರುವ ಮಹನೀಯರ
ಗೊಂಬೆಗಳನ್ನಿಟ್ಟುಕೊಂಡು ರಾಜಪುತ್ರಿಯು ಆಟವಾಡುತ್ತಿದ್ದಳು.
ಅವುಗಳನ್ನು ಈಗಲೂ ಪ್ರತ್ಯೇಕವಾಗಿ ರಕ್ಷಿಸಿಟ್ಟಿದ್ದಾರೆ. ಆಟಕ್ಕೆ
ಸಮವಯಸ್ಸಿನ ಜತೆಗಾರರೇ ರಾಜಪುತ್ರಿಗೆ ಇರಲಿಲ್ಲ. ಇದ
ರಿಂದ ಅವಳ ಮನಸ್ಸಿಗೆ ಸ್ವಲ್ಪ ಸಂಕೋಚವಿದ್ದಿರಬಹುದು.

ರಾಜಪುತ್ರಿಯು ಕೇವಲ ಸುಂದರಿ. ಮುಖಭಾವವು
ಕೋಮಲವಾಗಿದ್ದಿತು. ಥಳಥಳಿಸುತ್ತಿದ್ದ ಮುಖವು ಮೃದು
ವಾದ ಗುಂಗುರು ಕೂದಲಿನಿಂದ ಮತ್ತಷ್ಟು ಪ್ರಕಾಶಮಾನವಾಗಿ
ದ್ದಿತು. ವಿಶೇಷ ಕಾಂತಿಯಿಂದ ಕೂಡಿದ ಕಣ್ಣುಗಳನ್ನು



ನೋಡಿದರೆ, ಎಲ್ಲರಿಗೂ ರಾಜಪುತ್ರಿಯನ್ನು ಗೌರವಿಸಬೇಕೆಂಬ
ಭಾವನೆಯಾಗುತ್ತಿತ್ತು.

ರಾಜಪುತ್ರಿಯ ಸೋದರಮಾವನಾದ 'ಸಾಕ್ಸಕೋ
ಬರ್ಗ್' ಧೊರೆಗೆ ಇಬ್ಬರು ಪುತ್ರರು. ಎರಡನೆಯವನಾದ
'ಆಲ್ಬರ್ಟ್' 1819ನೇ ಆಗಸ್ಟು 19ರಲ್ಲಿ ಜನಿಸಿದನು. ಇವನೇ
ಮುಂದೆ ವಿಕ್ಟೋರಿಯಾ ರಾಜಕುಮಾರಿಗೆ, ಪತಿಯೆಂದು ನೆಂಟರು
ನಿಶ್ಚಯಿಸಿದರು. ಆಲ್ಬರ್ಟನ ತಂದೆಯು ಗುಣಶಾಲಿಯೆಂದು
ಪ್ರಖ್ಯಾತನಾಗಿದ್ದನು. ಹಿರಿಯಮಗನು ತಂದೆಯ ವಿಚಾರದಲ್ಲಿ
ಹೇಳಿರುವುದೇನಂದರೆ :—

"ನಮ್ಮ ತಂದೆಯು 'ವಿನಯ'ವೇ ಮೂರ್ತಿವೆತ್ತಂತೆ
ಇದ್ದನು. ಅವನು ನಮ್ಮನ್ನು ಎಂದೂ ಗದರಿಸದಿದ್ದರೂ, ಆತ
ನಲ್ಲಿ ನಮಗೆ ಭಯ ಭಕ್ತಿ ಪ್ರೀತಿಗಳಿದ್ದವು. ಅವನು ನೀತಿಪಾಠ
ವನ್ನು ಉಪನ್ಯಾಸ ಮಾಡುತಿರಲಿಲ್ಲ. ಆಗಾಗ ನಮ್ಮ ತಪ್ಪು
ಗಳನ್ನು ಉಪಾಯವಾಗಿ ತಿದ್ದುತಿದ್ದನು. ನಮ್ಮನ್ನು ಹೊಗಳ
ಬೇಕೆಂದರೆ ಅವನಿಗೆ ಹಿತವಿರಲಿಲ್ಲ. ಅವನು ನಮ್ಮನ್ನು ಭೂಷಿಸಿ
ದ್ದರೂ, ದೂಷಿಸಿದ್ದರೂ, ಉಂಟಾಗುತಿದ್ದುದಕ್ಕಿಂತಲೂ ಹೆಚ್ಚು
ಸತ್ಫಲವು ಆತನ 'ಸ್ವತ್ವ'ದಿಂದ ನಮಗುಂಟಾಯಿತು. 'ಯೋಗ್ಯ
ರೆನಿಸಿಕೊಳ್ಳಬೇಕೆಂದು ನನ್ನ ಪುತ್ರರಿಗೆ ಗೊತ್ತು. ಅವರು
ಸಜ್ಜನರಾಗಲು ತಾವೇ ಪ್ರಯತ್ನಪಡುತ್ತಾರೆ. ಅವರ ಶಿಕ್ಷಣೆ
ಯಲ್ಲಿ ನನಗೆ ಏನು ಕಷ್ಟವೂ ಇಲ್ಲ.' ಎಂದು ಆತನು ಹೇಳು
ತ್ತಿದುದನ್ನು ಕೇಳಿದರೇ ನಾವು ಶ್ರೇಷ್ಠರೆನಿಸಿಕೊಳ್ಳಬೇಕೆಂಬ
ಬಯಕೆಯು ನಮ್ಮಲ್ಲಿ ಹೆಚ್ಚುತ್ತಿತ್ತು. ಹಿರಿಯರೊಡನೆ ಸಂಭಾ

Digitized by ROJA MUTHIAH RESEARCH LIBRARY

ಷಣೆ, ಹೊರವಳಿಯ ಆಟ, ದೇಶಸಂಚಾರಗಳು, ನಮ್ಮ ಜೀವಿತ
ಕ್ರಮದಲ್ಲಿ ಸೇರಿದ್ದವು. ಕಲಾಕೌಶಲ್ಯಗಳಲ್ಲಿ ಪ್ರೀತಿ, ಆಷ್ಟ
ಹಾಸ್ಯವಿಲ್ಲದ ಬಾಳ್ಮೆಯ ಪದ್ಧತಿ, ದೃಢಸಂಕಲ್ಪ, ಕಷ್ಟಸಹಿಷ್ಣುತೆ,
ಧರ್ಮಬುದ್ಧಿ, ಸ್ವಾರ್ಥತ್ಯಾಗ ಮೊದಲಾದವುಗಳು ಆತನ
ಪ್ರಭಾವದಿಂದಲೇ ನಮ್ಮಲ್ಲಿ ಉಂಟಾದವು.'' ಈ ರೀತಿ ಬಾಲ್ಯ
ದಿಂದಲೂ ಶಿಕ್ಷಿತನಾದ 'ಆಲ್ಬರ್ಟ್' ರಾಜಕುಮಾರನು
'ವಿಕ್ಟೋರಿಯಾ' ರಾಜಪುತ್ರಿಗೆ ತಕ್ಕ 'ವರ'ನಲ್ಲವೇ?

ಐದು ವರುಷ ತುಂಬಲು, ರಾಜಪುತ್ರಿಯ ಶಿಕ್ಷಣ
ಪೋಷಣೆಗಳಿಗಾಗಿ ಒಬ್ಬ ಪಂಡಿತಳನ್ನು ಪಾಲಕಳನ್ನಾಗಿ ಗೊತ್ತು
ಮಾಡಿದರು. ಇಂಗ್ಲೆಂಡಿನ ರಾಣಿಯಾಗಲು ಅರ್ಹತೆಯನ್ನು
ಪಡೆಯುವಂತೆ ಮಾಡುವುದೇ ಈ ಬಾಲಶಿಕ್ಷೆಯ ಉದ್ದೇಶವಾ
ಗಿತ್ತು. ತಾನು ರಾಣಿಯಾಗುವ ವಿಚಾರವು ವಿಕ್ಟೋರಿಯಾಗೆ
ತಿಳಿದಿರಲಿಲ್ಲ. ಈ ವಿಚಾರವನ್ನು ರಾಜಪುತ್ರಿಗೆ ತಿಳಿಸಬೇಕೆಂದು
ಪಂಡಿತಳು ಯೋಚಿಸಿದಳು. ತಾಯಿಯೂ ಸಮ್ಮತಿಯನ್ನು
ಕೊಟ್ಟಳು. ಅನಂತರ ಈ ಪಾಲಕಳು ರಾಜಪುತ್ರಿಯು ಓದು
ತ್ತಿದ್ದ ಪುಸ್ತಕದಲ್ಲಿ ಇಂಗ್ಲೆಂಡಿನ ರಾಜರ ವಂಶವೃಕ್ಷವೊಂದನ್ನು
ಬರೆದಿಟ್ಟಳು. ಅಕಸ್ಮಾತ್ತಾಗಿ ಅದನ್ನು ನೋಡಿ, ರಾಜಪುತ್ರಿಯು
"ಓಹೋ, ಈ ರಾಜ್ಯವು ನನ್ನ ಕೈ ಸೇರಬೇಕಾಗಿದೆ. ಪಾಲ
ಕಳೇ, ನೀವು ಏತಕ್ಕಾಗಿ ನನ್ನ ವಿಚಾರದಲ್ಲಿ ಇಷ್ಟು ಶ್ರದ್ಧೆಯನ್ನು
ವಹಿಸುತ್ತಿರುವಿರೆಂದು ಈಗ ನನಗೆ ತಿಳಿಯಿತು. ನಾನು ಇನ್ನು
ಮುಂದೆ ವಿಶೇಷ ಜಾಣಳೂ, ಸಾಧುವೂ, ಆಗಬೇಕು. ನಿಮ್ಮೆ
ಲ್ಲರಿಗೂ ನನ್ನ ಶಿಕ್ಷಣೆಯಲ್ಲಿ ತೊಂದರೆಯಾಗದಂತೆ ನಾನು



ಪ್ರಯತ್ನ ಪಡುತ್ತೇನೆ'' ಎಂದಳೆಂದೂ, ಅನಂತರ ಕಾರಣವೇ
ತಿಳಿಯದೆ, ರಾಜಪುತ್ರಿಯು ಅತ್ತಳೆಂದೂ, ತಿಳಿಯಬರುತ್ತದೆ.

ಇಂಗ್ಲೆಂಡಿನ ರಾಣಿಯ ಧರ್ಮ, ಕಾರ್ಯಗೌರವಗಳೇನೆಂ
ಬುದನ್ನು, ತಾಯಿಯೂ ಸೋದರಮಾವನಾದ ಬೆಲ್ಜಿಯಂ
ದೊರೆಯೂ, ಆಗಾಗ ರಾಜಪುತ್ರಿಗೆ ತಿಳಿಸುತ್ತಿದ್ದರು. ರಾಜ
ಪುತ್ರಿಯೂ ಜನರ ಪ್ರೀತಿ ಗೌರವಗಳಿಗೆ ಪಾತ್ರಳೆನಿಸಿಕೊಂಡು
ಪ್ರವೃದ್ಧಮಾನಳಾಗುತ್ತಿದ್ದಳು. ಈ ಕಾಲದಲ್ಲಿ ಇಂಗ್ಲೆಂಡಿಗೆ
ಬಂದಿದ್ದ ಆಲ್ಬರ್ಟ್ ರಾಜಕುಮಾರನಲ್ಲಿ ರಾಜಪುತ್ರಿಗೆ ಅನುರಾ
ಗವು ಮೊದಲಾಯಿತು. ಈತನೇ ನನಗೆ 'ಅನುರೂಪನಾದ ಪತಿ'
ಎಂದು ಮನಸ್ಸಿನಲ್ಲಿ ವಿಕ್ಟೋರಿಯಾ ನಿಶ್ಚಯಿಸಿದಳು.

1837ನೇ ಜೂನ್ 20ನೇ ರಾತ್ರಿ 12 ಘಂಟೆಗೆ ನಾಲ್ಕನೇ
ವಿಲಿಯಂ ರಾಜನು, ಸ್ವರ್ಗಂಗತನಾದನು. ಬೆಳಗಿನ ಝಾವ
5 ಗಂಟೆಗೆ ಕೋಶಾಧ್ಯಕ್ಷನೂ, ರಾಜಗುರುವೂ, ರಾಜಪುತ್ರಿ
ಯಿದ್ದ ಅರಮನೆಗೆ ಬಂದರು. ರಾಜಪುತ್ರಿಯು ನಿದ್ದೆಯಲ್ಲಿ
ದ್ದಳು. ಆಕ್ಷಣವೇ ರಾಣಿಯನ್ನು ನೋಡಬೇಕಾದ ರಾಜಕಾರ್ಯ
ವಿದ್ದುದಾಗಿ ಅವರು ತಿಳಿಸಿ, ವಿಕ್ಟೋರಿಯಾ ರಾಣಿಯನ್ನು
ಏಳಿಸಿದರು. ಅನಂತರ ಅವರಿರ್ವರೂ ವಿಕ್ಟೋರಿಯಾ ಎದುರಿಗೆ
ನಮ್ರರಾಗಿ ನಿಂತು, ಆಕೆಯು ಇಂಗ್ಲೆಂಡಿನ ರಾಣಿಯಾದುದನ್ನು
ಬಿನ್ನೈಸಿದರು. ಆಗಲೇ ರಾಜ್ಯಭಾರವನ್ನು ರಾಣಿಯು ಆರಂಭಿಸಿ
ದರು. ಸಿಂಹಾಸನಾರೋಹಣದ ಉತ್ಸವವು 1838ನೇ ಜೂನ್
28ರಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಈ ಕಾಲದಲ್ಲಿ
ರಾಣಿಗೆ ಆಲ್ಬರ್ಟ್ ಬರೆದುದೇನೆಂದರೆ :—

Digitized by ROJA MUTHIAH RESEARCH LIBRARY

" ಯೂರೋಪು ಖಂಡದೊಳಗೆಲ್ಲಾ ಅತ್ಯಂತ ಪ್ರಬಲವಾದ ರಾಜ್ಯಕ್ಕೆ ನೀನು ರಾಣಿಯಾಗಿರುವೆ. ಲಕ್ಷಾಂತರ ಪ್ರಜೆಗಳ ಕ್ಷೇಮವು ನಿನ್ನ ಕೈಯಲ್ಲಿದೆ. ಘನವಾದ ಈ ಕಾರ್ಯವನ್ನು ನೆರವೇರಿಸಲು ತಕ್ಕ ಶಕ್ತಿಯನ್ನು ದೇವರು ನಿನಗೆ ಅನುಗ್ರಹಮಾಡಲಿ. ನೀನು, ಬಹುಕಾಲ ಸುಖಿಯಾಗಿ ಯಶಸ್ವಿಯಾಗಿ ರಾಜ್ಯವನ್ನಾಳಲೆಂದೂ, ನಿನ್ನ ಸುಪ್ರಯತ್ನಗಳನ್ನು ಪ್ರಜೆಗಳು ಮೆಚ್ಚಿ, ಅವರು ಕೃತಜ್ಞರಾಗಿ ರಾಜಭಕ್ತಿ ಪ್ರೀತಿಯಿಂದಿರಲೆಂದೂ ಹಾರೈಸುತ್ತೇನೆ. ''

ಸಿಂಹಾಸನಾರೋಹಣದ ಉತ್ಸವವು ಪೂರಯಿಸಿದೊಡನೆ, ರಾಣಿಯು ರಾಜ್ಯದಲ್ಲಿರುವ ಸಣ್ಣ ಮಕ್ಕಳನ್ನು ನೆನಪಿಗೆ ತಂದುಕೊಂಡು, ' ಅಂತಹ ಉತ್ಸವಗಳಲ್ಲಿ ಪಾಠಶಾಲೆಗಳಿಗೆ ಇನ್ನೊಂದುವಾರ ಹೆಚ್ಚು ರಜವನ್ನು ಕೊಡುವುದು ಪದ್ಧತಿಯಲ್ಲವೇ ?' ಎಂದು ಮಂತ್ರಿಗೆ ಬರೆದಳು. ಪ್ರಾರಂಭದಿಂದಲೂ ರಾಣಿಯ ಸುಗುಣ, ಶಾಂತಿ, ಪ್ರಭಾವ, ರಾಜಕಾರ್ಯದ ಪರಿಚಯಗಳು, ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದವು. ಆಗಿನ ಮುಖ್ಯ ಮಂತ್ರಿ ಲಾರ್ಡ್ ಮೆಲ್ಬೋರ್ನ್, ರಾಣಿಗೆ ಪಿತೃಸಮಾನನಾಗಿದ್ದನು. ವಿವೇಕಿಯಾದ ಆತನ ಸರಳ ಬುದ್ಧಿವಾದದಿಂದ ರಾಣಿಯ ಸ್ವಾಭಾವಿಕ ಶಕ್ತಿಯು ಪ್ರಬಲವಾಯಿತು.

ರಾಣಿಯು ಒಂದು ನಿಯಮಕ್ಕೆ ಸರಿಯಾಗಿ ಲೇಶಾಂಶವನ್ನು ಮರೆಯದೆ ಪ್ರತಿಯೊಂದು ಕೆಲಸದಲ್ಲಿಯೂ ಗಮನವಿಡುತ್ತಿದ್ದಳು. ಈ ವಿಚಾರದಲ್ಲಿ ಆಗಿನ ಕಾಗದ ಪತ್ರಗಳಿಂದ ತಿಳಿದುಬರುವುದೇನೆಂದರೆ :—

ಕನ್ನಡ ಸಾಹಿತ್ಯ ಪರಿಷತ್ತು ಸರಸ್ವತಿ ಭಂಡಾರ ಬೆಂಗಳೂರು-೧೮.



" ರಾಣಿಯು 8 ಘಂಟೆಯೊಳಗೆ ಎದ್ದು ಸ್ವಲ್ಪ ಆಹಾರವನ್ನು ತೆಗೆದುಕೊಂಡೊಡನೆಯೆ ಪ್ರಾತಃಕಾಲ ಮಂತ್ರಿಯೊಡನೆ ರಾಜಕಾರ್ಯದಲ್ಲಿ ನಿರತಳಾಗಿರುವಳು. ಮಧ್ಯಾಹ್ನ 2 ಘಂಟೆಗೆ ಕುದುರೆ ಸವಾರಿಗೆ ಹೋಗಿಬಂದು, ಸಂಗೀತವನ್ನು ಹೇಳುತ, ಕೇಳುತ ಇಷ್ಟಮಿತ್ರರೊಡನೆ ಸುಖವಾಗಿರುವಳು. ರಾತ್ರೆ 8 ಘಂಟೆಗೆ ಭೋಜನ. 11 ಘಂಟೆಗೆ ರಾಣಿಯು ಮಲಗುವಳು. ಅರಮನೆಯ ಕೆಲಸಗಳೆಲ್ಲವನ್ನೂ ರಾಣಿಯೇ ಸ್ವಂತವಾಗಿ ಆಜ್ಞಾಪಿಸುವಳು. ಅರಮನೆಯಲ್ಲಿ ಯಾರು ಎಲ್ಲಿರುವರೆಂದೂ, ಯಾರಕೆಲಸಗಳು ಏನೇನೆಂದೂ ರಾಣಿಯೇ ಮುಂದಾಗಿ ಗೊತ್ತುಮಾಡುವಳು. ''

———○———

1839ನೇ ಅಕ್ಟೋಬರ್‌ನಲ್ಲಿ ರಾಣಿಯ ಸೋದರಮಾವ ಲಿಯೋಪಾಲ್ಡ್ ರಾಜನು, ತನ್ನ ಅಣ್ಣನಮಕ್ಕಳು ಅರ್ನೆಸ್ಟು, ಆಲ್ಬರ್ಟ್ ಇಬ್ಬರ ಪೋಷಣೆಯನ್ನು ರಾಣಿಗೆ ವಹಿಸಿ ಅವರನ್ನು ಇಗ್ಲೆಂಡಿಗೆ ಕಳುಹಿಸಿದನು. ಆಲ್ಬರ್ಟಿಗೂ ರಾಣಿಗೂ ಇದ್ದ ಪೂರ್ವದ ಪರಿಚಯವು ಈಗ ಬಳೆಯಿತು. " ಆಲ್ಬರ್ಟ್ ಬಹಳ ಮನೋಹರನಾಗಿರುವನು '' ಎಂದು ರಾಣಿಯು ಮಾವನಿಗೆ ಬರೆದಳು. ಆಲ್ಬರ್ಟ್ ಇಂಗ್ಲೆಂಡಿಗೆ ತಲಪಿದ ಐದನೆ ದಿವಸ ರಾಣಿಯು ಮಂತ್ರಿಯನ್ನು ಬರಮಾಡಿ, ತನ್ನ ವಿವಾಹದ ವಿಷಯವನ್ನು ತಾನು ನಿರ್ಧರಮಾಡಿರುವುದಾಗಿ ತಿಳಿಸಿದಳು. ಮಂತ್ರಿಯು " ಈ ಭಾಗವು ತಮ್ಮ ಚಿತ್ತಕ್ಕೆ ಬಂದಿರಲಿಲ್ಲವೆಂದು ಪ್ರಜೆಗಳು



Digitized by ROJA MUTHIAH RESEARCH LIBRARY

ಚಿಂತಿಸುತ್ತಿದ್ದರು. ಈ ಶುಭ ಸಮಾಚಾರವನ್ನು ಕೇಳಿ ಅವರು ಬಹು ಸಂತೋಷಪಡುತ್ತಾರೆ. ಯಾವ ಅವಸ್ಥಾವಿಶೇಷದಲ್ಲೂ ಸ್ತ್ರೀಯು ಏಕಾಕಿನಿಯಾಗಿರಲಾರಳು. ವಿವಾಹದಿಂದ ತಾವು ಸುಖವಾಗಿರುವುದರಲ್ಲಿ ಲೇಶವೂ ಸಂಶಯವಿಲ್ಲ" ಎಂದನು.

ತನ್ನ ವಿವಾಹವುನಿಶ್ಚಯವಾದ ವಿಚಾರದಲ್ಲಿ ರಾಣಿಯು ಬರೆದಿಟ್ಟಿರುವುದೇನಂದರೆ. "ಹನ್ನೆರಡುವರೆ ಘಂಟೆಗೆ ನಾನು ಆಲ್ಬರ್ಟನ್ನುಅಂತಃಪುರಕ್ಕೆ ಬರಮಾಡಿದೆನು. ಅಲ್ಲಿ ಮತ್ತಾರೂ ಇರಲಿಲ್ಲ. ಸ್ವಲ್ಪಹೊತ್ತು ಮಾತನಾಡಿದನಂತರ," ನಾನು ನಿನ್ನನ್ನು ಕರೆಕಳುಹಿಸಿದ ಕಾರಣವು ನಿನಗೆ ತಿಳಿದಿರಬೇಕು. ನೀನು ನನ್ನನ್ನು ವರಿಸಲು ಸಮ್ಮತಿಸಿದರೆ, ನಾನು ಕೃತಾರ್ಥಳಾಗಿ ಸುಖಿಯಾಗಿರುವೆನು" ಎಂದೆನು. ಆಲ್ಬರ್ಟ್ ಆನಂದ ಪರವಶನಾಗಿ ತನ್ನ ಅಭೀಷ್ಟವನ್ನು ತೋರ್ಪಡಿಸಿದನು. ಅವನಿಗೆ ನಾನು ತಕ್ಕವಳಲ್ಲವೆಂದು ಹೇಳಿಕೊಂಡೆನು. ನನ್ನೊಡನೆ ಜೀವನಯಾತ್ರೆಯನ್ನು ನಡೆಯಿಸಲು ಅವನು ಸಂತೋಷಚಿತ್ತನಾಗಿರುವುದಾಗಿ ಹೇಳಿದನು."

ರಾಣಿಯು ಈ ವಿಷಯದಲ್ಲಿ ಮಾವನಿಗೆ "ನಾನು ಆಲ್ಬರ್ಟನ್ನು ಎಷ್ಟು ಪ್ರೀತಿಸುತ್ತೇನೋ, ಅದನ್ನು ಬರೆಯಲು ಸಾಧ್ಯವಿಲ್ಲ. ನನಗಾಗಿ ಅವನು ಬಹಳ ತ್ಯಾಗಮಾಡಿದಂತಾಗಿದೆ. ನನ್ನ ಸರ್ವಶಕ್ತಿಯಿಂದಲೂ ಇದಕ್ಕೆ ನಾನು ಪ್ರತೀಕಾರವನ್ನು ಮಾಡಲುಳ್ಳವಳಾಗಿದೇನೆ "ಎಂದು ಬರೆದಳು.

1840ನೇ ಪೆಬ್ರುವರಿ 10ರಲ್ಲಿ ವಿಕ್ಟೊರಿಯಾರಾಣಿಗೂ ಆಲ್ಬರ್ಟ್‌ರಾಜಪುತ್ರನಿಗೂ ವಿವಾಹವು ವಿಜೃಂಭಣೆಯಿಂದ ನಡೆಯಿತು. "ನನ್ನ ಮುದ್ದುಮನೋಹರನಾದ ಆಲ್ಬರ್ಟನ್ನು



ತೃಪ್ತನನ್ನಾಗಿಯೂ, ಸುಖಿಯಾಗಿಯೂ ಇಟ್ಟಿರುವ ಪುಣ್ಯವು ನನಗೆ ಲಭಿಸುವಂತೆ ದೇವರು ಅನುಗ್ರಹಿಸಲೆಂದು ರಾಣಿಯು ಪ್ರಾರ್ಥಿಸಿದಳು.

——o——

ರಾಜಕಾರ್ಯ ನಿರ್ವಾಹದಲ್ಲಿ ರಾಣಿಗೆ ಪತಿಯಿಂದ ವಿಶೇಷ ಸಹಾಯವಾಗಿದ್ದಿತು. ವಿವಾಹವಾದ ಕಾಲದಿಂದಲೂ ರಾಣಿಗೆ ಆಲ್ಬರ್ಟ್ ಮುಖ್ಯ ಸೆಕ್ರೆಟರಿಯಾದನು. ರಾಣಿಗೆ ಸೆಕ್ರೆಟರಿಯಾಗಲು ಅವಶ್ಯಕವಾದ ರಾಜ್ಯಾಡಳಿತದ ಪರಿಚಯವನ್ನು ಆಲ್ಬರ್ಟ್ ಪಡೆಯುತ ಬಂದನು. ಅಷ್ಟೇ ಅಲ್ಲ, ಪ್ರಜೆಗಳ ವಿಧ್ಯಾಭಿವೃದ್ಧಿ ಸಂಪದಭಿವೃದ್ಧಿ ಕಾರ್ಯಗಳಲ್ಲಿ ಆಲ್ಬರ್ಟ್ ಮುಂದಾಳಾದನು. ಇಂಗ್ಲೆಂಡಿನಲ್ಲಿ ಕಲಾಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು, ಏನೇನು ಪ್ರಯತ್ನಗಳನ್ನು ಮಾಡಬೇಕೆಂದು ಪರ್ಯಾಲೋಚಿಸಲು ಏರ್ಪಾಡಾದ ಸಂಘಕ್ಕೆ ಆಲ್ಬರ್ಟ್ ಅಧ್ಯಕ್ಷನಾಗಿದ್ದು ಜನರ ಮೆಚ್ಚುಗೆಯನ್ನು ಪಡೆದನು. ಆಲ್ಬರ್ಟನ ಪ್ರಯತ್ನದಿಂದಲೇ 1851 ರಲ್ಲಿ ಲಂಡನ್ನಲ್ಲಿ ಸರ್ವವಸ್ತು ಪ್ರದರ್ಶನವು ನಡೆಯಿತು.

"ವಿಕ್ಟೋರಿಯಾಗೆ ನನ್ನ ಕೈಲಾದಷ್ಟು ಉಪಯೋಗಕರವಾಗಿರಬೇಕು" ಎಂಬುದೇ ಈತನ ಮುಖ್ಯೋದ್ದೇಶವಾಗಿತ್ತು. ಆಲ್ಬರ್ಟ್ ರಾಜಕುಮಾರನು, ಯಾವ ಪಕ್ಷದವರೊಡನೆಯೂ ಸೇರದೆ ರಾಜ್ಯಕ್ಷೇಮವೊಂದರಲ್ಲೇ ದೃಷ್ಟಿಯುಳ್ಳ

Digitized by ROJA MUTHIAH RESEARCH LIBRARY

ವನಾಗಿದ್ದನು. ಅರಮನೆಯಲ್ಲಿ ಮಿತವ್ಯಯದಿಂದ, ಪೂರ್ವದ ಖರ್ಚುಗಳನ್ನೆಲ್ಲ ಕಡಿಮೆ ಮಾಡಿ, ಸಾಲದ ತೊಂದರೆಯಿಲ್ಲದೆ ರಾಜರೂ ಸುಖವಾಗಿ ಜೀವಿಸಲು ಸಾಧ್ಯವೆಂಬುದನ್ನು ಆಚರಣೆಯಿಂದ ತೋರಿಸಿದನು. ನೂತನ ವ್ಯವಸಾಯಕ್ರಮಗಳನ್ನೂ, ದನಗಳ ಆರೈಕೆ ಕ್ರಮವನ್ನೂ, ತಾನೇ ಅರಮನೆಯಲ್ಲಿ ರೂಢಿಗೆ ತಂದು ಜನರಿಗೆಲ್ಲಾ ಪ್ರಕಟಪಡಿಸಿದನು. ರಾಣಿಯ ಸಮ್ಮತಿಯಿಂದ ಅರಮನೆಯಲ್ಲಿ ಅನೇಕ ತಿದ್ದುಪಾಟುಗಳಾದುವು. ರಾತ್ರಿ ಬಹಳಹೊತ್ತು ರಾಣಿಯು ಕೆಲಸಮಾಡುತ್ತಿದುದನು ಉಪಾಯವಾಗಿ ತಪ್ಪಿಸಿ, ಅರಮನೆಯಲ್ಲಿ ಸರ್ವರೂ ತನ್ನ ಇಷ್ಟಾನ್ನಸಾರ ನಡೆಯುವಂತೆಮಾಡಿ, ಆಲ್ಬರ್ಟ್ ಎಲ್ಲರನ್ನೂ ದಯೆ ಅನುರಾಗಗಳಿಂದ ಪಾಲಿಸಿಕೊಂಡಿದ್ದನು.

ಆಲ್ಬರ್ಟ್ ರಾಜಕುಮಾರನು ಬೆಳಿಗ್ಗೆ ಆರು ಗಂಟೆಯೊಳಗೆ ಏಳುತ್ತಿದ್ದನು. 9 ಗಂಟೆಯುವರೆಗೂ ಕಾಗದ ಪತ್ರಗಳನ್ನು ಓದಿ, ಉತ್ತರವನ್ನು ಬರೆಯುವುದೇ ಆಗುತ್ತಿತ್ತು. ಅನಂತರ ಅವನು ಎಲ್ಲ ವರ್ತಮಾನ ಪತ್ರಿಕೆಗಳನ್ನು ಓದಿ ಅದರಲ್ಲಿನ ಮುಖ್ಯ ವಿಷಯಗಳನ್ನು ರಾಣಿಗೆ ತಿಳಿಸುತ್ತಿದ್ದನು. ಈ ಮಧ್ಯದಲ್ಲೇ ಅವಕಾಶ ದೊರೆತಾಗ ಮಕ್ಕಳೊಡನೆಯೂ ಸ್ವಲ್ಪ ವಿನೋದವಾಗಿರುತ್ತಿದ್ದನು. ಅನಂತರದಲ್ಲಿ ಮಂತ್ರಿಗಳೊಡನೆ ರಾಜ್ಯ ಕಾರ್ಯವನ್ನು ಪರ್ಯಾಲೋಚಿಸಿ ಮುಖ್ಯ ಕಾಗದ ಪತ್ರಗಳನ್ನು ನೋಡುತ್ತಿದ್ದನು. ರಾಜಕಾರ್ಯವು ಪೂರಯಿಸಿದನಂತರ ರಾಣಿಯೊಡನೆ ಎಲ್ಲಾದರೂ ಸಂಚಾರಕ್ಕೆ ಹೊರಡುತ್ತಿದ್ದನು. ರಾಣಿಯ ಪತಿಗೆ ವಿರಾಮವೂ, ವಿಶ್ರಾಂತಿಯೂ ಇಲ್ಲದೆ,



ಯಾವಾಗಲೂ ಸರ್ಕಾರಿ ಕೆಲಸದ ತೊಂದರೆ ಯಿರುತ್ತಿತ್ತು. ಆಲ್ಬರ್ಟ್ ಇವೆಲ್ಲವನ್ನೂ ಸಂತೋಷದಿಂದ ಮಾಡುತ, ರಾಣಿಗೆ ವಿಶೇಷ ಸಹಾಯಕನಾಗಿದ್ದನು. ಈ ದಂಪತಿಗಳು ಎಲ್ಲಾ ವಿಷಯದಲ್ಲೂ ಅನ್ಯೋನ್ಯವಾಗಿ ಪ್ರೀತಿಯಿಂದಿದ್ದರು.

——○——

ಮಕ್ಕಳೆಂದರೆ ರಾಣಿಗೆ ಬಹಳ ಪ್ರೀತಿ. ಆಲ್ಬರ್ಟ್ ಮತ್ತು ರಾಣಿಯ ದಾಂಪತ್ಯ ಸುಖದಿಂದ ಐವರು ಪುತ್ರಿಯರೂ ನಾಲ್ವರು ಪುತ್ರರೂ ಜನಿಸಿದರು. ಅವರಲ್ಲಿ ಎರಡನೆಯವನಾದ ಎಡ್ವರ್ಡ್ ಚಕ್ರವರ್ತಿಯ ಕುಮಾರರು ಐದನೇ ಜಾರ್ಜ್ ಎಂಬ ಹೆಸರಿನಿಂದ ಈಗಿನ ಬ್ರಿಟಿಷ್ ಚಕ್ರವರ್ತಿಗಳಾಗಿದಾರೆ.

ರಾಜಪುತ್ರರ ಸುಶಿಕ್ಷಣೆಯುಫಲದಿಂದ ದೇಶಾಭಿವೃದ್ಧಿಯಾಗಬೇಕೆಂದು ವಿಕ್ಟೋರಿಯಾರಾಣಿಗೆ ತಿಳಿದಿತ್ತಾಗಿ ರಾಣಿಯು ತನ್ನ ಮಕ್ಕಳ ಶಿಕ್ಷಣೆ ಪೋಷಣೆಯ ವಿಚಾರದಲ್ಲಿ ಅತ್ಯಂತ ಶ್ರೇಷ್ಠವಾದ ಏರ್ಪಾಡುಗಳನ್ನು ಇಟ್ಟಿದ್ದಳು.

“ ಮಕ್ಕಳು ಅಟ್ಟಹಾಸ ಪದ್ಧತಿಯಿಲ್ಲದೆ ಬೆಳೆಯಬೇಕು. ಪಾಠಕಾಲವನ್ನು ಬಿಟ್ಟು ಮತ್ತೆಲ್ಲಾ ಕಾಲದಲ್ಲೂ ಮಕ್ಕಳು ತಾಯ್ತಂದೆಗಳ ಬಳಿಯಲ್ಲಿದ್ದು, ಎಲ್ಲದರಲ್ಲೂ ಅವರನ್ನೇನಂಬಿ ಅವರಲ್ಲಿ ಭಕ್ತಿಯಿಡುವುದನ್ನು ಕಲಿಯಬೇಕು. ಮತವಿಚಾರದಲ್ಲಿ ಶಾಶ್ವತ ಫಲವುಂಟಾಗಬೇಕಾದರೆ ತಾಯಿ, ಮಕ್ಕಳಿಗೆ ಭೂತದಯೆ, ಧರ್ಮ ವಿಚಾರಗಳನ್ನು ಕಲಿಸಬೇಕು. ದೇವರಲ್ಲಿ ಮಕ್ಕಳಿಗೆ ಭಯ,

Digitized by ROJA MUTHIAH RESEARCH LIBRARY

ಕಂಪನಗಳಿರದೆ ಭಕ್ತಿಪ್ರೀತಿಗಳು ಹೆಚ್ಚಬೇಕು. ಇವಷ್ಟೂ ಗೃಹದಲ್ಲಿ ಮಾತೃವಿನ ಪ್ರಭಾವದಿಂದ ಸಾಧ್ಯವಾಗಬೇಕು." ಎಂಬುದೇ ರಾಣಿಯಮತ. ರಾಜಕಾರ್ಯಭಾರದಿಂದ ಮಕ್ಕಳೊಡನೆ ವಿಶೇಷಕಾಲವನ್ನು ಕಳೆಯಲು ಅವಕಾಶವಿರಲಿಲ್ಲವೆಂದು ರಾಣಿಯು ಆಗಾಗ ವ್ಯಾಕುಲಪಡುತ್ತಿದ್ದಳು.

ರಾಜಮಕ್ಕಳ ಶಿಕ್ಷಣೆಯು ಒಂದು ನಿಯಮವನ್ನು ಅನುಸರಿಸಿತ್ತು. ಅವರು ಎಳೆಯವರಾದಾಗ ಸಭಾಸ್ಥಾನಕ್ಕೆ ಹೋಗಲು ಅನುಮತಿಯಿರಲಿಲ್ಲ. ಪಾಠ ಕ್ರಮದಲ್ಲಿ ಅವರು ಬುದ್ಧಿಯನ್ನೂ ಹಸ್ತವನ್ನೂ ವಿಶೇಷವಾಗಿ ಉಪಯೋಗಿಸಬೇಕಾಗಿತ್ತು. ರಾಜಪುತ್ರರು ಬಡಗಿಯ ಕೆಲಸವನ್ನೂ ತೋಟದ ಕೆಲಸವನ್ನೂ ಸ್ವಂತವಾಗಿ ಮಾಡುತ್ತಿದ್ದರು. ರಾಜಪುತ್ರಿಯರು ಅಡಿಗೆ, ಮನೆಯ ಆಡಳಿತ ವಿಚಾರಗಳನ್ನು ಅಭ್ಯಾಸದಿಂದ ಕಲಿಯುತ್ತಿದ್ದರು. ಸ್ವಂತವಾಗಿ ಮಾಡಿದ ವಸ್ತುಗಳನ್ನು ಉತ್ಸವಾದಿಗಳಲ್ಲಿ ಇತರರಿಗೆ ಬಹುಮಾನವಾಗಿ ಕೊಡಲು ಮಕ್ಕಳಿಗೆ ಸ್ವಾತಂತ್ರ್ಯವಿತ್ತು. ಕುದುರೆಯ ಸವಾರ, ಈಜುವುದೂ, ಶಿಕ್ಷಣಕ್ರಮದಲ್ಲಿ ಸೇರಿತ್ತು. ಹೊರವಳಿಯ ಗಾಳಿಯಲ್ಲಿ ವ್ಯಾಯಾಮವು ಅತ್ಯತ್ತಮವಾದುದೆಂದು ರಾಣಿಗೆ ತಿಳಿದಿತ್ತು. ಆ ಕಾರಣದಿಂದ ಮಕ್ಕಳ ಆಟ ಪಾಟಗಳಿಗೆ ವಿಶೇಷವಾಗಿ ಅನುಕೂಲಗಳು ಏರ್ಪಟ್ಟಿದ್ದವು. ಇವೆಲ್ಲದರ ಜತೆಗೆ ಮುಂದೆ ರಾಜನಾಗಲು ತಕ್ಕ ಯೋಗ್ಯತೆಯುಂಟಾಗುವಂತೆ ಯುವರಾಜನ ಶಿಕ್ಷಣೆಯಿತ್ತು.

———o———

A-1239.



ದೇಶಾಭಿವೃದ್ಧಿಗ ಅಜ್ಞಾನ, ದಾರಿದ್ರ್ಯಗಳು ಮುಖ್ಯ ಶತೃಗಳು. ಅಜ್ಞಾನವೊಂದು ನಿವಾರಣೆಯಾದರೆ ಇತರ ನ್ಯೂನತೆಗಳನ್ನು ತಿದ್ದಲು ಅವಕಾಶವುಂಟಾಗುವುದು. ವಿಕ್ಟೋರಿಯಾ ರಾಣಿಯ ಆಳ್ವಿಕೆಯ ಆದಿಯಲ್ಲಿ ಇಂಗ್ಲೆಂಡಿನಲ್ಲಿ ಬಡವರ ಮಕ್ಕಳ ಶಿಕ್ಷಣೆ ಪೋಷಣೆಯು ಅತೃಪ್ತಿಕರವಾಗಿತ್ತು. ನೈರ್ಮಲ್ಯ, ಗಾಂಭೀರ್ಯ, ಸುಜ್ಞಾನಗಳು ಅಭಾವವಾಗಿದ್ದುವು. ದಾರಿದ್ರ್ಯದ ಹಾವಳಿಯು ವಿಪರೀತವಾಗಿತ್ತು. ಯಂತ್ರ ಪ್ರಾಬಲ್ಯದಿಂದ, ದೊಡ್ಡ ಕೆಲಸಗಾರರ ಅವಶ್ಯಕತೆಯು ತಗ್ಗಿ, ಹೆಂಗಸರೂ, ಸಣ್ಣ ಹುಡುಗರೂ ಕಾರ್ಖಾನೆಯಲ್ಲಿ ಉದ್ಯೋಗಿಗಳಾದರು. ಇವರಿಗೆ ಕೆಲಸದ ಕಾಲ ಪ್ರಮಾಣಗಳು ಹೆಚ್ಚಿದವು. ಆದಾಯವು ಮಾತ್ರ ಹೆಚ್ಚಲಿಲ್ಲ. ವಿದ್ಯೆಯ ಹೆಸರೇ ಇಲ್ಲ.

"1857 ರಲ್ಲಿ ಇಂಗ್ಲೆಂಡಿನಲ್ಲಿ 3 ರಿಂದ 15 ವರುಷಗಳೊಳಗಿನ ವಯಸ್ಸಿನ ಹುಡುಗರಲ್ಲಿ 6 ಲಕ್ಷ ಹುಡುಗರು ಪಾಠಶಾಲೆಗೆ ಹೋಗದೆ ಕೂಲಿ ಕೆಲಸದಲ್ಲಿದ್ದರು. 20 ಲಕ್ಷ ಹುಡುಗರು ಶಾಲೆಗೂ ಹೋಗದೆ ಯಾವ ಕೆಲಸವೂ ಇಲ್ಲದೆ ಇದ್ದರು." ಎಂದು ರಾಣಿಯ ಪತಿ ಆಲ್ಬರ್ಟ್ ಬರೆದಿರುತ್ತಾನೆ.

ವಿಕ್ಟೋರಿಯಾ ರಾಣಿಗೆ ಮಕ್ಕಳಲ್ಲಿ ವಿಶೇಷವಾದ ಅಭಿಮಾನವಿದ್ದುದರಿಂದ ಈ ಅನ್ಯಾಯವು ನಿಂತಿತು. 1842 ರಲ್ಲಿ ಹೆಂಗಸರನ್ನೂ ಹುಡುಗರನ್ನೂ ಗಣಿಗಳಲ್ಲಿ ನೇಮಿಸ ಕೂಡದೆಂದೂ, ವಾರಕ್ಕೆ 58 ಗಂಟೆಗಿಂತ ಹೆಚ್ಚಾಗಿ ಕೆಲಸಗಾರರ ಕೈಯಲ್ಲಿ ಕೆಲಸ ಮಾಡಿಸ ಕೂಡದೆಂದೂ, ವಿಧಾಯಕವಾಯಿತು. ಅನಂತರ ವಿದ್ಯೆಗೆ ಸೌಕರ್ಯಗಳು ಕಲ್ಪಿತವಾದವು. 1854 ರಲ್ಲಿ ಇಂಗ್ಲೆಂಡಿನಲ್ಲಿ

Digitized by ROJA MUTHIAH RESEARCH LIBRARY

3825 ಪಾಠಶಾಲೆಗಳಿದ್ದವು, 1885 ರಲ್ಲಿ 21,689 ಪಾಠಶಾಲೆಗಳಾದವು. ಕೇವಲ ಬಡಹುಡುಗರಿಗಾಗಿ ಮಾಡಿದ ಏರ್ಪಾಡಿಗೆ ರಾಣಿಯೇ ಪ್ರಮುಖಳಾಗಿ ನಿಂತಳು. 1871 ರಲ್ಲಿ ಈ ಪ್ರಯತ್ನವು ಹೀಗೆತ್ತೆಂದು ವರ್ಣಿತವಾಗಿದೆ.

'ಐದು ಹುಡುಗರನ್ನಿಟ್ಟುಕೊಂಡು ಒಂದು ಪಾಠಶಾಲೆಯು ಪ್ರಾರಂಭವಾಗಿ, 27 ವರ್ಷಗಳಲ್ಲಿ 300 ಶಾಲೆಗಳೂ, ಅವುಗಳಲ್ಲಿ 30,000 ಹುಡುಗರೂ, 3000 ಧರ್ಮಕ್ಕಾಗಿ ಕೆಲಸ ಮಾಡುತ್ತಿದ್ದ ಬೋಧಕರೂ ಆದರು. ಈ ಕಾಲದಲ್ಲಿ 3 ಲಕ್ಷ ಹುಡುಗರಿಗೆ ಈ ಶಾಲೆಗಳಲ್ಲಿ ಶಿಕ್ಷೆಯಾಯಿತು.' ಈ ರೀತಿ ಬಾಲಕರ ಶಿಕ್ಷಣೆಗೆ ವಿಶೇಷ ಗಮನವನ್ನು ಕೊಡದೆ ಇದ್ದಲ್ಲಿ, ಅನೇಕರು ಅಧರ್ಮವನ್ನವಲಂಬಿಸಿ ದುರ್ಮಾರ್ಗಪ್ರವರ್ತಕರಾಗಿ ದೇಶಕ್ಕೆ ಕೇಡನ್ನು ಉಂಟುಮಾಡುವ ಸಂಭವವಿರುತ್ತಿತ್ತು. ಸಣ್ಣ ಮಕ್ಕಳಿಗೆ ಹೀಗೆ ದಯೆಯನ್ನು ತೋರಿಸಿ ಅಭಿವೃದ್ಧಿಗೆ ತಂದುದೇ ವಿಕ್ಟೋರಿಯಾ ಕಾಲದ ಮುಖ್ಯ ವಿಷಯವೆನ್ನಬಹುದು.

——○——

ಇತರರ ಕಷ್ಟವನ್ನು ನಿವಾರಿಸುವುದರಲ್ಲಿಯೂ ಪಾಪ, ಅಜ್ಞಾನ ದಾರಿದ್ರ ದೋಷಗಳಿಂದುಂಟಾಗಿರುವ ಕೇಡನ್ನು ತಪ್ಪಿಸುವುದರಲ್ಲಿಯೂ, ಸ್ತ್ರೀಯರು ರಾಣಿಯ ಆಳ್ವಿಕೆಯಲ್ಲಿ ಅದ್ಭುತ ಕಾರ್ಯಗಳನ್ನು ನಿರ್ವಹಿಸಿದರು. ರೋಗಿಗಳ ಸಂರಕ್ಷಣೆಯು ಸ್ತ್ರೀಯರಿಗೆ ಸೇರಿದುದೆಂದು ಗೊತ್ತಾಗಿದ್ದರೂ, ಅದಕ್ಕಾಗಿ ಸ್ತ್ರೀಯರಿಗೆ



ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ ಬೆಂಗಳೂರು-೧೮.

ಯಾವ ಶಿಕ್ಷಣೆಯೂ ಅವಶ್ಯಕವಿಲ್ಲವೆಂದು ತಪ್ಪು ಅಭಿಪ್ರಾಯವಿತ್ತು. ಕೀರ್ತಿಶೇಷಳಾದ ಫ್ಲಾರೆನ್ಸು ನೈಟಿಂಗೇಲ್ ಎಂಬ ಮಹನೀಯಳು "ಗಂಡಸಿಗೆ ಪ್ರತಿಕೆಲಸದಲ್ಲಿಯೂ ಶಿಕ್ಷಣೆಯು ಅವಶ್ಯಕವಿರುವಂತೆಯೇ ಸ್ತ್ರೀಯರಿಗೆ ಅವರವರ ಕೆಲಸದಲ್ಲಿ ನೈಪುಣ್ಯವು ಬರಬೇಕಾದರೆ ಶಿಕ್ಷಣೆಯು ಅತ್ಯವಶ್ಯಕ" ಎಂದು ಸಾರಿದಳು.

ರೋಗಿಗಳ ಉಪಚರಣೆಯ ವಿಚಾರದಲ್ಲಿ ಈ ಮಹನೀಯಳು ಅನೇಕ ವರುಷ ವಿದ್ಯೆಯನ್ನು ಕಲಿತು 10 ವರುಷ ಕಾಲ ಯೂರೋಪುಖಂಡದ ಮುಖ್ಯ ದೇಶಗಳಲ್ಲೆಲ್ಲಾ ಸುತ್ತಾಡಿ, ಸ್ವಸುಖವನ್ನೂ, ವಿಶ್ರಾಂತಿಯನ್ನೂ ತೃಣೀಕರಿಸಿ, ತಾನು ಹಿಡಿದ ಕಾರ್ಯದಲ್ಲಿ ಸಿದ್ಧಳೆನಿಸಿಕೊಂಡಳು.

1854 ರಲ್ಲಿ ನಡೆದ ಕ್ರಿಮಿಯಾ ಯುದ್ಧದಲ್ಲಿ, ಯುದ್ಧರಂಗದಲ್ಲಿ 2,568 ಜನರು ಸತ್ತರು. ಆಸ್ಪತ್ರೆಗಳಲ್ಲಿ ಅನುಕೂಲಸಾಲದೆ 18,058 ಜನರು ಮೃತರಾದರು. ಇಂಗ್ಲೆಂಡಿನಲ್ಲಿ ಹಾಹಾಕಾರವು ಹೆಚ್ಚಿತು. ಹೊಸದಾಗಿ ಜನರನ್ನೂ ಸಾಮಗ್ರಿಗಳನ್ನೂ ಸರ್ಕಾರದವರು ಯುದ್ಧರಂಗಕ್ಕೆ ಕಳುಹಿಸಿದರು. ಈ ಸಮಯಕ್ಕೆ ಸರಿಯಾಗಿ ಫ್ಲಾರೆನ್ಸು ನೈಟಿಂಗೇಲ್ ಅನೇಕ ದಾದಿಯರನ್ನು ಕರೆದುಕೊಂಡು ಯುದ್ಧಭೂಮಿಗೆ ಪ್ರಯಾಣ ಮಾಡಿದಳು. ಒಂದೆರಡು ತಿಂಗಳಲ್ಲಿ ಈಕೆಯ ರಕ್ಷಣೆಯಲ್ಲಿ 10,000 ಜನ ರೋಗಿಗಳಿದ್ದರು.

ಒಂದು ಆಸ್ಪತ್ರೆಯು ಉದ್ದದಲ್ಲಿ 2⅓ ಮೈಲಿ ಇದ್ದಿತು. ರೋಗಿಗಳ ಉಪಚರಣೆ, ಔಷಧಿ, ಪಥ್ಯಗಳು ಕ್ರಮಕ್ಕೆಬಂದವು. ರೋಗಿಗಳ ಮರಣ ಸಂಖ್ಯೆಯು ತಗ್ಗಿತು.



Digitized by ROJA MUTHIAH RESEARCH LIBRARY

ಫ್ಲಾರೆನ್ಸ್ ನೈಟಿಂಗೇಲ್ ಇಂಗ್ಲೆಂಡಿಗೆ ಹಿಂತಿರುಗಿ ಬಂದಾಗ ರಾಣಿಯೂ, ದೇಶವೆಲ್ಲವೂ ಕೃತಜ್ಞತೆಯಿಂದ ಅವಳಿಗೆ ಸ್ವಾಗತವನ್ನು ಬಯಸಿದರು. ಜನರು 50,000 ಪೌನುಗಳನ್ನು ಚಂದಾ ಎತ್ತಿ ಫ್ಲಾರೆನ್ಸ್ ನೈಟಿಂಗೇಲ್‌ಗೆ ಅರ್ಪಿಸಿದರು. ಈ ಮಹನೀಯಳು ಆದ್ರವ್ಯವೆಲ್ಲವನ್ನೂ ರೋಗಿಗಳ ಉಪಚರಣೆಯಲ್ಲಿ ಸ್ತ್ರೀಯರನ್ನು ಶಿಕ್ಷಿತರನ್ನಾಗಿ ಮಾಡಲು ವೈದ್ಯಶಾಲೆಗಳಿಗೆ ಧರ್ಮ ಮಾಡಿದಳು. ಈಗಲೂ ಈಕೆಯು ಕೊಟ್ಟ ಸಲಹೆಯಂತೆಯೇ ಯುದ್ಧರಂಗದಲ್ಲಿ ಗಾಯಪಟ್ಟವರ ಉಪಚರಣೆಯು ನಡೆಯುತ್ತಿದೆ. ವೈದ್ಯರನ್ನೂ ದಾದಿಯರನ್ನೂ ಶತ್ರುಪಕ್ಷದವರೂ ಗೌರವಿಸಬೇಕೆಂದು ಒಪ್ಪಂದವಾಗಿದೆ.

ಹೀಗೆ ಎತ್ತ ನೋಡಿದರೂ ರಾಣಿಯ ಆಳ್ವಿಕೆಯಲ್ಲಿ ದೇಶಾಭಿವೃದ್ಧಿ ಕಾರ್ಯಗಳು ಹರಡುತಿದ್ದವು. ರಾಜಕಾರ್ಯದಲ್ಲಿ ಸ್ವಲ್ಪವಿರಾಮವು ದೊರತಾಗ, ರಾಜ ದಂಪತಿಗಳು ಬಾಲ್ಮೊರಲ್ ಎಂಬಲ್ಲಿಗೆ ಹೋಗುತ್ತಿದ್ದರು. ಅಲ್ಲಿ ರಾಣಿಯು ರಾಜ್ಯಾಡಳಿತದ ತೊಂದರೆಯಿಲ್ಲದೆ ನಿರಾತಂಕವಾಗಿ ಪತಿ ಮತ್ತು ಮಕ್ಕಳೊಡನೆ ಕಾಲವನ್ನು ಕಳೆಯುತಿದ್ದಳು. ಆಲ್ಬರ್ಟನ ವಿವೇಕದಿಂದಲೂ, ಶ್ರದ್ಧೆಯಿಂದಲೂ, ಬಾಲ್ಮೊರಲ್‌ನಲ್ಲಿ ರಾಜಗೃಹಗಳು ಹೊಸದಾಗಿ ಕಟ್ಟಿ ಕ್ರಮಕ್ಕೆ ಬಂದವು. ಯಾವ ಆಡಂಬರವನ್ನೂ ಇಟ್ಟುಕೊಳ್ಳದೆ, ರಾಣಿಯು ಧಾರಾಳವಾಗಿ ಅಲ್ಲಿನ ಜನರನ್ನುನೋಡಿ ಮಾತನಾಡಿಕೊಂಡು ಬರುತ್ತಿದ್ದಳು.

ರಾಜದಂಪತಿಗಳೂ, ಮಕ್ಕಳೂ, ಸಂಚರಿಸಿದ ಊರಲ್ಲೆಲ್ಲಾ ಜನರು ಅವರಿಗೆ ಸುಖವನ್ನೂ ಸ್ವಾಗತವನ್ನೂ ಬಯಸಿ





ದರು. ದೇಶಕ್ಕೇ ತಾಯಿಯೆಂಬುದು ವಿಕ್ಟೋರಿಯಾಗೆ ಸಾರ್ಥಕ ನಾಮವಾಗಿತ್ತು.

ರಾಣಿಯೊಡನೆ ಆಲ್ಬರ್ಟ್, ತನ್ನ ಧೈರ್ಯ, ಸಾಮರ್ಥ್ಯ, ಶಕ್ತಿ, ಸುಗುಣಗಳನ್ನು, ಪರೋಪಕಾರ ಕಾರ್ಯದಲ್ಲೇ ಉಪಯೋಗಿಸುತಿದ್ದನು. ಪ್ರಜೆಗಳ ಕ್ಷೇಮಕ್ಕಾಗಿಯೇ ರಾಜರು ಸೃಷ್ಟಿಯಾಗಿರುವರೆಂದು ಆಲ್ಬರ್ಟನ ಮತ. ಸಮಸ್ತ ಸಂಗಡದವರೂ ಅಭಿವೃದ್ಧಿಗೆ ಬರಬೇಕೆಂದು ಆತನಮುಖ್ಯೋದ್ದೇಶ.

——o——

1861ರಲ್ಲಿ ರಾಣಿಯ ತಾಯಿಯು ಸ್ವರ್ಗಸ್ಥಳಾದಳು. ರಾಣಿಯು ಚಿಂತಾಕ್ರಾಂತಳಾಗಿ ರಾಜಕಾರ್ಯಕ್ಕೆ ಗಮನವನ್ನು ಕೊಡಲಾರದವಳಾದಳು. ಇದರಿಂದ ಆಲ್ಬರ್ಟಗೆ, ಕೆಲಸವೂ, ಶ್ರಮೆಯೂ ಆತಂಕವೂ ಹೆಚ್ಚಿದವು. ಅಷ್ಟೇ ಅಲ್ಲ. ಆಲ್ಬರ್ಟನ ಪರಮಮಿತ್ರನಾದ ಪೋರ್ಚಗಲ್ ರಾಜನೂ ಅದೇವರುಷ ಮೃತನಾದನು. ಇವೆಲ್ಲದರಿಂದಲೂ ಆಲ್ಬರ್ಟನ ಆರೋಗ್ಯಸ್ಥಿತಿಯು ತಪ್ಪಿತು. ಬಿಡತಿಯೇ ಇಲ್ಲದ ಕೆಲಸದಿಂದ ಆಲ್ಬರ್ಟಗೆ ದಿನೇದಿನೇ ದೇಹಾಲಸ್ಯವು ಹೆಚ್ಚಿ 1861 ನೇ ಡಿಶಂಬರ್ 14ರಲ್ಲಿ ಅವನು ದೈವಾಧೀನನಾದನು.

ರಾಣಿಯ ಪ್ರಿಯಪತಿಯು ಗತಿಸಿದುದರಿಂದ ದೇಶಕ್ಕೆಲ್ಲಾ ಮಹದ್ವ್ಯಸನವುಂಟಾಯಿತು. ರಾಣಿಯ ವ್ಯಥೆಯನ್ನು ವರ್ಣಿಸಿ ತೀರದು. ಪತಿಯ ಸುಗುಣಗಳನ್ನೂ, ಅವನಿಂದುಂಟಾಗುತಿದ್ದ

Digitized by ROJA MUTHIAH RESEARCH LIBRARY

ಸಹಾಯವನ್ನೂ ನೆನೆದುಕೊಂಡು ರಾಣಿಯು ಚಿಂತಾಸಾಗರದಲ್ಲಿ ಮುಳುಗಿದಳು.

ರಾಣಿಯ ಹಿತ, ಪ್ರಜಾಕ್ಷೇಮ, ಇವುಗಳಲ್ಲಿ ಆಲ್ಬರ್ಟ್‌ನಷ್ಟು ಪ್ರೀತಿಯಿದ್ದವರು ಮತ್ತಾರೂ ಇರಲಿಲ್ಲ. ಆಲ್ಬರ್ಟ್ ಮತ್ತು ರಾಣಿಯ ದಾಂಪತ್ಯವು ಬಹಳ ಸುಖಕರವಾಗಿತ್ತು. ಇಪ್ಪತ್ತೊಂದು ವರುಷವೂ, ನೂತನ ದಂಪತಿಗಳಂತೆಯೇ, ಯಾವಾಗಲೂ ಅವರು ಸಂತೋಷಿಗಳಾಗಿದ್ದರು. ಪ್ರಪಂಚಕ್ಕೇ ಮಾದರಿಯಂತಿದ್ದ ಇಂತಹ ದಾಂಪತ್ಯವು ಬಹುಕಾಲವಿರಲು ದೈವೇಚ್ಛೆಯಿರಲಿಲ್ಲ. ಭಗವದಾಜ್ಞೆಯನ್ನು ಮೀರಲುಂಟೇ ? ದೇಶವೆಲ್ಲಾ ರಾಣಿಗೆ ತಮ್ಮ ಅನುತಾಪವನ್ನು ಸ್ಪಷ್ಟಪಡಿಸಿತು.

——o——

ವಿಕ್ಟೋರಿಯಾ ಮಹಾರಾಣಿಯ ಆಳ್ವಿಕೆಯಲ್ಲಿ ಬ್ರಿಟಿಷು ಚಕ್ರಾಧಿಪತ್ಯವು ಪ್ರಬಲವಾದ ವಿಚಾರವು ಚರಿತ್ರೆಯಿಂದ ವಿಶದನಾಗುವುದು. 1858 ರಲ್ಲಿ ರಾಣಿಯು ಇಂಡಿಯಾ ಚಕ್ರವರ್ತಿನಿಯೆಂಬ ಹೆಸರಿನಿಂದ ಇಂಡಿಯಾ ರಾಜ್ಯಭಾರವನ್ನು ವಹಿಸಿದಳು. ಈ ಶುಭ ಸಮಾಚಾರವನ್ನು ಪ್ರಸಿದ್ಧಿಪಡಿಸಲು ಕೊಟ್ಟ ಇಸ್ತಿಹಾರನಾಮೆಯಲ್ಲಿ, ರಾಣಿಯ ಅಪಾರವಾದ ಔದಾರ್ಯ, ದಯೆ, ಧರ್ಮಬುದ್ಧಿಗಳು ಪ್ರಕಟವಾಗಿವೆ. "ಬ್ರಿಟಿಷ್ ಪ್ರಜೆಗಳಂತೆಯೇ ಹಕ್ಕು ಬಾಧ್ಯತೆಗಳನ್ನು ಇಂಡಿಯಾದಲ್ಲಿನ ಪ್ರಜೆಗಳಿಗೂ ಅನುಗ್ರಹಿಸಿದೇವೆ. ದೇಶೀಯ ರಾಜರು ತಮ್ಮ



ರಾಜ್ಯವನ್ನು ಆಳಿಕೊಂಡಿರಬಹುದು. ಮಕ್ಕಳಿಲ್ಲದವರು ದತ್ತನ್ನು ತೆಗೆದುಕೊಳ್ಳಬಹುದು. ಆ ದತ್ತರು ಸಿಂಹಾಸನಕ್ಕೆ ಬರಬಹುದು. ಇಂಡಿಯಾದಲ್ಲಿ ರೈಲುಕಾಂಗಾರಿ, ನಾಲಾಬಡಾವಣೆ ಮುಂತಾದವುಗಳನ್ನು ದೇಶೀಯರ ಕ್ಷೇಮಕ್ಕೂ, ಅಭಿವೃದ್ಧಿಗೂ ನಡೆಸುತ್ತಿದೇವೆ. ಮತವಿಚಾರದಲ್ಲಿ ಜನರಿಗೆ ಯಾವ ನಿರ್ಬಂಧವೂ ಇರುವುದಿಲ್ಲ. ಭಾರತೀಯರೇ, ನಿಮ್ಮ ಅಭ್ಯುದಯವೇ ನಮಗೆ ಬಲ. ನಿಮ್ಮ ಸಂತುಷ್ಟಿಯೇ ನಮಗೆ ರಕ್ಷಣೆ. ನಿಮ್ಮ ಕೃತಜ್ಞತೆಯೇ ನಮಗೆ ಬಹುಮಾನ." ಎಂಬ ರಾಣಿಯ ಪ್ರೀತಿಪುರಸ್ಸರವಾದ ಅನುಗ್ರಹ ವಚನಗಳಿಂದ ಇಂಡಿಯಾದ ಜನರಲ್ಲಿ ರಾಜ ಪ್ರೀತಿಯು ಮತ್ತಷ್ಟು ಹೆಚ್ಚಿದುದು ಆಶ್ಚರ್ಯವೇನು !

ರಾಣಿಯು ಇಂಡಿಯಾಕ್ಕೆ ಸ್ವಂತವಾಗಿ ಬರಲಾಗಲಿಲ್ಲ. ಆದರೂ 1875 ರಲ್ಲಿ ಯುವರಾಜನನ್ನು ಇಂಡಿಯಾದಲ್ಲಿ ಸಂಚಾರ ಮಾಡಿ ಬರಲು ಕಳುಹಿಸಿದಳು. ಇಂಡಿಯಾದಲ್ಲೆಲ್ಲೆಲ್ಲೂ ಯುವರಾಜನಿಗೆ ಸತ್ಕಾರಗಳು ನಡೆದು ಜನರ ರಾಜಭಕ್ತಿ ಪ್ರೀತಿಗಳು ನಿದರ್ಶನಕ್ಕೆ ಬಂದುವು.

1887 ರಲ್ಲಿ ರಾಣಿಯ 50 ವರುಷದ ಆಳ್ವಿಕೆಯ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲೆಲ್ಲೂ ರಾಣಿಗೆ ಅಭಿನಂದನವೂ ಭಕ್ತಿ ಪ್ರೀತಿಗಳೂ ಪ್ರಕಟವಾದುವು. ಆ ಕಾಲದಲ್ಲಿ ಲಂಡನ್ ಪ್ರಜೆಗಳಿಗೆ ರಾಣಿಯು ತಿಳಿಯ ಪಡಿಸಿದುದೇನಂದರೆ. "ಈ ಉತ್ಸವದಲ್ಲಿ ನೀವು ತೋರಿಸಿರುವ ಪ್ರೀತಿ, ರಾಜಭಕ್ತಿಗಳು ನನ್ನ ಮನಸ್ಸನ್ನು ತಟ್ಟಿವೆ. ದುಃಖಮಿಶ್ರವೇ ಇಲ್ಲದೆ, ನಿರಂತರ ಸುಖದಿಂದ ನನ್ನ ಪತಿಯೊ

Digitized by ROJA MUTHIAH RESEARCH LIBRARY

ಡನೆ 22 ವರ್ಷಗಳೂ, ಅನಂತರ ಅವನ ರಕ್ಷಣೆ ಸಲಹೆಗಳಿಲ್ಲದೆ ಈಚಿಗೂ, ಅಂತು ಒಟ್ಟು 50 ವರುಷಗಳ ಕಾಲ ನಿಮ್ಮನ್ನಾಳಿ ಕೊಂಡಿರುವುದು ನಿಮಗೆ ಸಮರ್ಪಕವಾಗಿದೆಯೆಂದು ತಿಳಿಯಲು ಹರ್ಷಿಸುತ್ತೇನೆ. ಈ ಭಾವನೆಯಿಂದಲೂ, ನಿಮ್ಮ ಪ್ರೀತಿ ವಿಶ್ವಾಸ ಗಳಿಗೆ ಕೃತಜ್ಞತೆಯಿಂದಲೂ, ನಿಮ್ಮ ಕ್ಷೇಮಚಿಂತನೆಯಲ್ಲೇ ನನ್ನ ಆಯುಸ್ಸನ್ನು ಕಳೆಯುವೆನು. ದೇವರು ರಾಷ್ಟ್ರಕ್ಕೂ, ಪ್ರಜೆಗಳಿಗೂ, ಸುಭಿಕ್ಷವನ್ನು ಅನುಗ್ರಹಿಸಲೆಂದು ಭಕ್ತಿ ಪೂರ್ವ ಕವಾಗಿ ಪ್ರಾರ್ಥಿಸುತ್ತೇನೆ.'' ಮತ್ತೆ 1897 ರಲ್ಲಿ ರಾಣಿಯ ಆಳ್ವಿಕೆಯ 60 ನೇ ವರುಷದ ಉತ್ಸವವು ಇನ್ನೂ ಅತಿಶಯ ವಾಗಿ ವಿಜೃಂಭಣೆಯಿಂದ ನಡೆಯಿತು. ಆಗ್ಯೆ ರಾಣಿಯು ಮತ್ತೆ ಪ್ರಜೆಗಳಿಗೆ ತಿಳಿಸಿದುದೇನಂದರೆ. "ನನ್ನ ಸುಖ ದುಃಖಗಳೆರಡ ರಲ್ಲೂ ನೀವು ಅನುರಾಗವನ್ನು ತೋರಿಸಿರುತ್ತೀರಿ. ನಾನು ಪ್ರತಿಯಾಗಿ ನನ್ನ ಕೃತಜ್ಞತೆ ವಿಶ್ವಾಸಗಳನ್ನು ತಿಳಿಯಪಡಿಸುತ್ತೇನೆ. ಪ್ರಪಂಚದ ಎಲ್ಲಾ ಭಾಗದಿಂದಲೂ ನನ್ನ ಪ್ರಜೆಗಳ ಪ್ರತಿನಿಧಿಗಳು ಇಲ್ಲಿಗೆ ಸೇರಿ ನನ್ನಲ್ಲಿ ತೋರಿಸಿರುವ ಪ್ರೀತಿಯಿಂದ ನನಗೆ ಅಪರಿ ಮಿತವಾದ ಆನಂದವುಂಟಾಗಿದೆ. ಇದಕ್ಕಾಗಿ ಕೃತಜ್ಞತೆಯಿಂದ ಎಲ್ಲರನ್ನು ವಂದಿಸುತ್ತೇನೆ.''

ರಾಣಿಯ 64 ವರುಷಗಳ ಆಳ್ವಿಕೆಯಲ್ಲಿ ದೇಶಾಭಿವೃದ್ಧಿ, ವಿದ್ಯಾಭಿವೃದ್ಧಿ, ಐಶ್ವರ್ಯಾಭಿವೃದ್ಧಿ ಪ್ರಯಾಣಸೌಕರ್ಯಗಳು ಹೆಚ್ಚಿ ದವು. ಹೀಗೆ ಕೀರ್ತಿವಂತಳಾದ ರಾಣಿಯು 1901 ಜನವರಿ 22 ರಲ್ಲಿ ಸ್ವರ್ಗಂಗತಳಾದಳು.



ಸರಳತೆಯೇ ವಿಕ್ಟೋರಿಯಾರಾಣಿಯ ಜೀವನರಹಸ್ಯ. ಪ್ರಪಂಚದಲ್ಲೆಲ್ಲಾ ಪ್ರಖ್ಯಾತಳಾದ ರಾಣಿಯಾದರೂ ಶುದ್ಧ ಮನಸ್ಸಿನಿಂದ, ಪ್ರಜಾನುರಾಗ ಉಳ್ಳವಳಾಗಿ, ವಿಕ್ಟೋರಿಯಾ ರಾಣಿಯು ದೇಶಕ್ಕೆ ತಾಯಿಯೋಪಾದಿಯಲ್ಲಿದ್ದಳು. ರಾಣಿಯು ಯಾವಾಗಲೂ ಕಾರ್ಯಪರಾಯಣಳಾಗಿದ್ದಳು. ಎಷ್ಟೇಕಷ್ಟವಾ ದರೂ, ಹಿತವಿಲ್ಲದಿದ್ದರೂ, ನ್ಯಾಯಮಾರ್ಗವನ್ನೂ ಕರ್ತವ್ಯ ವನ್ನೂ ಬಿಟ್ಟು ಹಿಂತಿರುಗುತ್ತಿರಲಿಲ್ಲ. ಸ್ವಾಭಾವಿಕ ಸಾಮರ್ಥ್ಯ, ವಿವೇಕ, ಅನುಭವಗಳ ಫಲದಿಂದ ರಾಣಿಯು ಎಲ್ಲಾ ರಾಜರಿಗೂ ಮಾದರಿಯಾಗಿದ್ದಳು. ಅರಮನೆಯ ಆಡಳಿತದಲ್ಲಿ ರಾಣಿಯು ತನ್ನ ವಿವೇಕವನ್ನು ವಿಶೇಷವಾಗಿ ಪ್ರಕಾಶಪಡಿಸಿದಳು. ಆಗಾಗ ಅನ್ಯದೇಶದ ರಾಜರು ರಾಣಿಯ ಅಥಿತಿಯಾಗಿದ್ದರೂ, ಸ್ವಲ್ಪವೂ ಸಾಲಮಾಡದೆ ಅವರಿಗೆ ಉಪಚರಣೆಯನ್ನು ರಾಣಿಯು ವಿಜೃಂಭ ಣೆಯಿಂದ ನಡೆಸುತಿದ್ದಳು. ರಾಣಿಯ ನಾಲ್ಕು ಅರಮನೆಗಳಲ್ಲಿ ಸುಮಾರು 2000 ನೌಕರರಿದ್ದರು. ಇವರೆಲ್ಲರನ್ನೂ ವಿತರಣೆ ಯಿಂದ ಆಳಿಕೊಂಡಿದ್ದುದು ರಾಣಿಯ ಜಾಣ್ಮೆಯನ್ನು ತೋರಿಸು ವುದು. ಪತಿಯಾದ ಆಲ್ಬರ್ಟ್ ವಿಧಾಯಿಸಿದ, ಕ್ರಮ, ನಿರ್ಣ ಯಗಳನ್ನು ಸ್ವಲ್ಪವೂ ಬಿಡದಂತೆ ರಾಣಿಯು ಆಚರಣೆಯಲ್ಲಿಡಿ ಸಿದಳು.

ತೊಂದರೆಯಲ್ಲಿರುವುವರನ್ನೂ, ದುಃಖಪೀಡಿತರಾದವರನ್ನೂ ಸಮಾಧಾನಪಡಿಸುವುದು ರಾಣಿಯ ಮುಖ್ಯಕೆಲಸವಾಗಿತ್ತು. ರಾಣಿಯ ಆಳ್ವಿಕೆಯ 50 ನೇ 60ನೇ ವರುಷದ ಉತ್ಸವಗಳಲ್ಲಿ ಬಂದ ಉಡುಗೆರೆಯ ಹಣವೆಲ್ಲವನ್ನೂ ರಾಣಿಯು ಬಡರೋಗಿಗಳ

Digitized by ROJA MUTHIAH RESEARCH LIBRARY

ಉಪಚರಣೆಗೆ ದಾದಿಯರನ್ನು ಶಿಕ್ಷಿಸಲು ಶಾಲೆಗಳಿಗೆ ಧರ್ಮ ಮಾಡಿದಳು.

ಇಂತಹ ಪವಿತ್ರಚಾರಿತ್ರಳಾದ ವಿಕ್ಟೋರಿಯಾ ರಾಣಿಯು ಮಕ್ಕಳ ಮುಮ್ಮೊಕ್ಕಳ ಮಧ್ಯದಲ್ಲಿ ಈ ಲೋಕಯಾತ್ರೆಯನ್ನು ಪೂರಯಿಸಿದಳು. ರಾಣಿಗೆ ಶತೃವೇ ಪ್ರಪಂಚದಲ್ಲಿರಲಿಲ್ಲ. ಅನ್ಯ ದೇಶೀಯರಿಗೂ ರಾಣಿಯಲ್ಲಿ ವಿಶೇಷ ಗೌರವವಿದ್ದಿತು. ಪ್ರಜೆಗಳಾದರೋ ರಾಣಿಯನ್ನು ದೇವತೆಯಂತೆ ಪ್ರೀತಿಸಿ ಪೂಜಿಸುತ್ತಿದ್ದರು.

ಆದಕಾರಣ ವಿಕ್ಟೋರಿಯಾ ಮಹಾರಾಣಿಯ ಹೆಸರು
ಜಗತ್ಪ್ರಸಿದ್ಧವಾಗಿರುವುದು ಆಶ್ಚರ್ಯವೇನು !

*All Rights Reserved.*

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚು ಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|
| 2 JAN 1983 | |
| 12 DEC 1988 | |

ಪುಸ್ತಕಸೂಚಿ

ವ. ಸಂ: V, 56ಉ VIC N

ಕ್ರ. ಸಂ: 1239.

ಸೀರಾಮ ( )

ವ. ಸಂ: V, 56ಉ VIC N

ಕ್ರ. ಸಂ: 1239

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

## ನಮ್ಮಲ್ಲಿ ದೊರೆಯುವ ಪುಸ್ತಕಗಳು.

—೦—

| | | | |
|---|---|---|---|
| ಗ್ಲಾಡ್‌ಸ್ಟನರವರ ಮಹಿಮೆ | ೦ | ೧ | ೦ |
| ವಿಕ್ಟೋರಿಯಾ | ೦ | ೧ | ೦ |
| ಭಾರತ ಕಥಾಸಾರ ಸಂಗ್ರಹ | ೦ | ೨ | ೦ |
| 'ನನ್ನ ಆಚಾರ್ಯ' ಸ್ವಾಮಿ ವಿವೇಕಾನಂದರವರ ಉಪನ್ಯಾಸ | ೦ | ೩ | ೦ |
| 'ಜನರಲ್ಲಿ ಕಾರ್ಯನಿರ್ವಾಹಕ ಶಕ್ತಿಯನ್ನು ಹೆಚ್ಚಿಸುವುದು ಹೇಗೆ' ಎಂಬ ಉಪನ್ಯಾಸ | ೦ | ೪ | ೦ |
| ಕಲಿಯುಗ (ಒಂದು ಹೊಸಕಥೆ) | ೦ | ೫ | ೦ |
| ನಿರ್ಮಲೆ (Goldsmith's 'She stoops to conquer.') | ೦ | ೬ | ೦ |
| ದಯಾರಾಮ( „ Good natured man) | ೦ | ೮ | ೦ |

(ಅಚ್ಚಾಗುತ್ತಿದೆ.)

ಕ್ಯಾಕ್ಸ್ಟನ್ ಬ್ರಾಂಚ್ ಪ್ರೆಸ್,
ಕೋಟೆ, ಬೆಂಗಳೂರು ಸಿಟಿ.

Digitized by ROJA MUTHIAH RESEARCH LIBRARY